ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198

E.Mail Address:
mimsmandya@gmail.com

ಸಂಖ್ಯೆ: ಮಿಮ್ಸ್/ಆಶಾ/04(ಸಾ)/2014-15 ದಿನಾಂಕ: 22.05.2015

# ಸುತ್ತೋಲೆ

ವಿಷಯ: Publications, Presentations, Research Projects ಹಾಗೂ Awards & Achievements ಗಳನ್ನು ಸಂಸ್ಥೆಯ ವೆಬ್‌ಸೈಟಿನಲ್ಲಿ ಪ್ರಕಟಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎಲ್ಲಾ ಬೋಧಕ ಸಿಬ್ಬಂದಿಗಳು ತಾವು ಪ್ರಕಟಿಸಿರುವ Publications, Presentations ಮತ್ತು ಕೈಗೊಂಡ Research Projects ಗಳನ್ನು ಸಂಸ್ಥೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲು ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ವಿಕಾಸಸೌಧ, ಬೆಂಗಳೂರು ರವರು ಆದೇಶಿಸಿರುತ್ತಾರೆ. ಅದರಂತೆ ಈಗಾಗಲೇ ಬೋಧಕ ಸಿಬ್ಬಂದಿಗಳು ಸಲ್ಲಿಸಿರುವ Research Projects, Publications, Presentations ಗಳನ್ನು ಸಂಸ್ಥೆಯ ವೆಬ್‌ಸೈಟ್ www.mimsmandya.org ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಮೂಲಕ ಸಂಸ್ಥೆಯ ಎಲ್ಲಾ ಬೋಧಕ ಸಿಬ್ಬಂದಿಗಳಿಗೆ ತಿಳಿಸುವುದೇನೆಂದರೆ ಸಂಸ್ಥೆಯ ವೆಬ್‌ಸೈಟಿನಲ್ಲಿ ಪ್ರಕಟಿಸಿರುವ Publications, Presentations, Research Projects ಗಳ ಪಟ್ಟಿಯನ್ನು ಪರಿಶೀಲಿಸಿ, ಅವುಗಳಲ್ಲಿ ತಮ್ಮ ಪ್ರಕಟಣೆಗೆ ಸಂಬಂಧಿಸಿದಂತೆ ಏನಾದರೂ ತಪ್ಪುಗಳಿದ್ದರೆ ಅಥವಾ ಪಟ್ಟಿಯಲ್ಲಿ ಬಿಟ್ಟು ಹೋಗಿದ್ದರೆ ಅವುಗಳನ್ನು ಸೂಕ್ತ ದಾಖಲೆಗಳೊಂದಿಗೆ ವಿಭಾಗ ಮುಖ್ಯಸ್ಥರಿಗೆ ಸಲ್ಲಿಸುವುದು.

ವಿಭಾಗ ಮುಖ್ಯಸ್ಥರು ತಮ್ಮ ವಿಭಾಗದ ಬೋಧಕ ಸಿಬ್ಬಂದಿವರ್ಗದವರು ಸಲ್ಲಿಸಿದ Publications, Presentations, Research Projects ಗಳನ್ನು ಪಟ್ಟಿ ಮಾಡಿ, ಹಾಗೂ ತಮ್ಮ ವಿಭಾಗಕ್ಕೆ ಸಂಬಂಧಿಸಿದಂತೆ ಬೋಧಕ ವೈದ್ಯರು, ಸ್ನಾತಕೋತ್ತರ / ಸ್ನಾತಕಪೂರ್ವ ವೈದ್ಯ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಯಾವುದಾದರೂ Achievements ಅಥವಾ Awards ಪಡೆದಿದ್ದರೆ ಅವುಗಳನ್ನು ಸಹ ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಲುವಾಗಿ ಪ್ರತ್ಯೇಕ ಪಟ್ಟಿಮಾಡಿ, ಕಂಪ್ಯೂಟರ್ ಟೈಪ್ ಮಾಡಿಸಿ ಅಗತ್ಯ ದಾಖಲೆಗಳೊಂದಿಗೆ "ವೆಬ್‌ಸೈಟಿನಲ್ಲಿ ಪ್ರಕಟಿಸುವ ಸಂಬಂಧವಾಗಿ" ಎಂದು ಪತ್ರ ಬರೆದು **ದಿನಾಂಕ: 06.06.2015 ರೊಳಗೆ** ಕಛೇರಿಗೆ ಸಲ್ಲಿಸುವುದು.

ತಮ್ಮ ವಿಭಾಗಕ್ಕೆ ಸಂಬಂಧಿಸಿದಂತೆ ಯಾವುದೇ Publications, Presentations, Research Projects ಗಳು ಇಲ್ಲದಿದ್ದರೆ "ತಮ್ಮ ವಿಭಾಗದಲ್ಲಿ ಯಾವುದೇ Publications, Presentations, Research Projects ಗಳು ಇರುವುದಿಲ್ಲ" ಎಂದು ಪತ್ರ ಬರೆದು ತಿಳಿಸಲು ವಿಭಾಗ ಮುಖ್ಯಸ್ಥರಿಗೆ ಸೂಚಿಸಿದೆ. ನಂತರ ಅವುಗಳನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಇನ್ನು ಮುಂದೆ ಎಲ್ಲಾ ಬೋಧಕ ಸಿಬ್ಬಂದಿಗಳು ತಾವು ಕೈಗೊಳ್ಳುವ / ಪ್ರಕಟಿಸುವ Research Projects, Publications, Presentations ಗಳನ್ನು ವಿಭಾಗ ಮುಖ್ಯಸ್ಥರ ಗಮನಕ್ಕೆ ತಂದು, ಸಂಸ್ಥೆಯ Institutional Scientific Committee ಹಾಗೂ Institutional Ethical Committee ಗಳ ಪರಿಶೀಲನೆಗೆ ಒಳಪಡಿಸಿ, ಸಂಸ್ಥೆಯ ನಿರ್ದೇಶಕರ ಅನುಮೋದನೆ ಪಡೆದು ಪ್ರಕಟಿಸುವಂತೆ ಸೂಚಿಸಿದೆ.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ

<u>ಪ್ರತಿಯನ್ನು:</u>

1. ಸಂಸ್ಥೆಯ ಎಲ್ಲಾ ವಿಭಾಗ ಮುಖ್ಯಸ್ಥರ ಮಾಹಿತಿಗೆ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸುತ್ತಾ, *ತಮ್ಮ ವಿಭಾಗದ ಎಲ್ಲಾ ಬೋಧಕವರ್ಗದವರ ಗಮನಕ್ಕೆ ತಂದು ಅವರ ಸಹಿ ಪಡೆಯಲು ಈ ಮೂಲಕ ಸೂಚಿಸಿದೆ.*
2. ಕಛೇರಿ ಪ್ರತಿ.